# ಜ್ಞಾನಭಿಕ್ಷೆಗಾಗಿ ಪಾದಯಾತ್ರೆ

ಜನರಲ್ಲಿ ಮಾನವೀಯ ಮೌಲ್ಯಗಳ ಅರಿವು ಮೂಡಿಸುವ ಉದ್ದೇಶದಿಂದ ವಿವೇಕಾನಂದ ಎಚ್‌.ಕೆ. ರಾಜ್ಯದಲ್ಲಿ ಪಾದಯಾತ್ರೆ ನಡೆಸುತ್ತಿದ್ದಾರೆ. ಅವರ ಪಾದಯಾತ್ರೆಗೆ ನಾಲ್ಕುನೂರು ದಿನ ತುಂಬಿರುವ ಸಂದರ್ಭದಲ್ಲಿ, ಅವರ ಪಯಣದ ಉದ್ದೇಶ ಹಾಗೂ ಅನುಭವಗಳ ಕುರಿತಂತೆ ಮಾತುಕತೆ.

■ ರಾಘವೇಂದ್ರ ಕೆ. ತೊಗರ್ಸಿ

◆ **ಪಾದಯಾತ್ರೆಯ ಉದ್ದೇಶ ಏನು?**

ನನಗೀಗ 53 ವರ್ಷ. ಸಮಾಜಕ್ಕೆ ಏನಾದರೂ ಕೊಡಬೇಕು ಎಂದು ಯೋಚಿಸಿ ಬರವಣಿಗೆಯನ್ನು ಆರಂಭಿಸಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ನಿತ್ಯವೂ 'ಪ್ರಬುದ್ಧ ಮನಸ್ಸು ಪ್ರಬುದ್ಧ ಸಮಾಜ, ಮನಸುಗಳ ಅಂತರಂಗದ ಚಳವಳಿ' ಎಂದು ಬರೆಯಲು ಆರಂಭಿಸಿದೆ. ಆರೇಳು ವರ್ಷದ ನಂತರ ಅದನ್ನು ಮೀರಿ ಇನ್ನೇನಾದರೂ ಮಾಡುವ ಯೋಚನೆ ಬಂತು. ನನ್ನ ಫಿಟ್‌ನೆಸ್ ವಿಶ್ವಾಸ ಇರುವುದರಿಂದ ಪಾದಯಾತ್ರೆ ಕೈಗೊಳ್ಳುವ ಸಂಕಲ್ಪ ಮಾಡಿದೆ.

ರಾಜ್ಯದ ಎಲ್ಲ ತಾಲ್ಲೂಕುಗಳನ್ನು ಕಾಲ್ನಡಿಗೆಯಲ್ಲೇ ತಲುಪಬೇಕು ಎಂದು 2016ರಲ್ಲೇ ನಿರ್ಧರಿಸಿದ್ದೆ. ಆಗ ಅದು ಸಾಧ್ಯವಾಗಲಿಲ್ಲ. 2020ರ ಅ. 2ರಂದು ಹಳೆಯ ಕನಸನ್ನು ಕಾರ್ಯರೂಪಗೊಳಿಸುವ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದೆ. ನವೆಂಬರ್ 1, 2020ರಂದು ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನ ವನಮಾರ್ಪಳ್ಳಿ ಎಂಬ ಹಳ್ಳಿಯಿಂದ ಪಾದಯಾತ್ರೆ ಪ್ರಾರಂಭಿಸಿದೆ. ಅದರ ಉದ್ದೇಶ 'ಜಾಗೃತಿ ಮತ್ತು ಅಧ್ಯಯನ' ಎನ್ನುವುದಾಗಿತ್ತು. ಆ ಮೂಲಕ ಜ್ಞಾನದ ಮರುಪೂರಣ ಮಾಡಿಕೊಳ್ಳುವ ಆಸೆ ನನ್ನದಾಗಿತ್ತು. ಅದಕ್ಕೊಂದು ಸ್ಪಷ್ಟತೆ ಇರಲಿ ಎಂಬ ಉದ್ದೇಶದಿಂದ, 'ಮಾನವೀಯ ಮೌಲ್ಯಗಳ ಪುನರುತ್ಥಾನಕ್ಕಾಗಿ ಜ್ಞಾನಭಿಕ್ಷಾ ಪಾದಯಾತ್ರೆ' ಎಂದು ನನ್ನ ಪಾದಯಾತ್ರೆಯ ಉದ್ದೇಶವನ್ನು ಸ್ಪಷ್ಟಪಡಿಸಿಕೊಂಡೆ. ಸಮಾಜದಲ್ಲಿ ಕುಸಿಯುತ್ತಿರುವ ಮಾನವೀಯ ಮೌಲ್ಯಗಳಿಗೆ ಯಾರು ಕಾರಣ? ಅದರ ಪುನರ್ ಸ್ಥಾಪನೆ ಮಾಡುವ ಸಾಧ್ಯತೆಯ ಹುಡುಕಾಟ ಇವತ್ತಿಗೆ (ಅ. 6, 2021) 399ನೇ ದಿನ. ಕೋಲಾರ ಜಿಲ್ಲೆ ಪ್ರವೇಶ ಮಾಡಿದ್ದೇನೆ. ಸುತ್ತಾಟದಲ್ಲಿ 24ನೇ ಜಿಲ್ಲೆ. ಮಂಚೇನಹಳ್ಳಿಯಿಂದ ಗುಡಿಬಂಡೆಗೆ ಹೋಗುತ್ತಿದ್ದೇನೆ. ಇವತ್ತಿಗೆ 10,200 ಕಿ.ಮೀ. ನಡೆದಿದ್ದೇನೆ. ಇನ್ನೂ 3000 ಕಿ.ಮೀ. ಸಾಗಬೇಕಿದೆ. ಚಾಮರಾಜನಗರ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರದಲ್ಲಿ ಪಾದಯಾತ್ರೆ ಕೊನೆಗೊಳ್ಳುತ್ತದೆ.



◆ **ಸಮಾರೋಪ ಸಮಾರಂಭದ ಕಾರ್ಯಸ್ವರೂಪ ಯಾವ ರೀತಿ ಇರಲಿದೆ?**

ಯಾವುದೇ ಸ್ಪಷ್ಟತೆ ಇಲ್ಲ. ಯಾರಿಂದಲೂ ಹಣ ಪಡೆಯಬಾರದು ಎನ್ನುವುದು ನನ್ನ ಸಂಕಲ್ಪ. ಈ ಯಾತ್ರೆಯಲ್ಲಿ ಕೆಲವೊಂದು ಕಾಲೇಜಿನಲ್ಲಿ ಉಪನ್ಯಾಸ ಮಾಡಿಸಿ, ಸಂಭಾವನೆ ನೀಡಲು ಮುಂದಾಗಿದ್ದರು. ಆಕಾಶವಾಣಿಯವರು ತಮ್ಮ ಸಂದರ್ಶನಕ್ಕೆ ಸಂಭಾವನೆ ನೀಡಲು ಬಂದಿದ್ದರು. ರಸ್ತೆಯಲ್ಲಿ ಗುರುತು–ಪರಿಚಯ ಇಲ್ಲದವರೂ ಐವತ್ತು– ನೂರು ರೂಪಾಯಿ ಕೊಡಲು ಬರುತ್ತಾರೆ. ಯಾರಿಂದಲೂ ಒಂದು ರೂಪಾಯಿ ಪಡೆದಿಲ್ಲ. ನಾನು ಕೂಡ ಒಂದು ರೂಪಾಯಿ ಖರ್ಚು ಮಾಡುತ್ತಿಲ್ಲ. ಕಾರ್ಯಕ್ರಮವನ್ನೂ ಹಣ ಇಲ್ಲದಂತೆ ಮಾಡುತ್ತೇನೆ. ನನ್ನದು ನೋಂದಾಯಿತ ಸಂಸ್ಥೆ ಅಲ್ಲ. ಈ ಯಾತ್ರೆಗೆ ಸರ್ಕಾರದಿಂದ ಅನುಮತಿ ಪಡೆದಿಲ್ಲ. ಲಾಕ್‌ಡೌನ್ ಅವಧಿಯಲ್ಲೂ ಪಾದಯಾತ್ರೆ ನಿಲ್ಲಿಸಿಲ್ಲ. ಆಹ್ವಾನದ ಮೇರೆಗೆ 2000ಕ್ಕೂ ಅಧಿಕ ಕಾರ್ಯಕ್ರಮ ನೀಡಿದ್ದೇನೆ. ಎಲ್ಲ ಕಡೆ ನನ್ನ ಓದುಗರಿಂದ ಸಹಾಯ ಆಗಿದೆ. ಹಣವೇ ಮಾನವೀಯಮೌಲ್ಯ ಕುಸಿತಕ್ಕೆ ಮೂಲ ಎಂದು ಹಣ ಮುಟ್ಟುತ್ತಿಲ್ಲ. ನಾನು ಆರ್ಥಿಕವಾಗಿ ಸ್ಥಿತಿವಂತನಲ್ಲ; ಬಾಡಿಗೆ ಮನೆಯಲ್ಲೇ ಇದ್ದೇನೆ. ಯಾತ್ರೆಯಲ್ಲಿ ಊಟ ವಸತಿಯನ್ನು ಯಾರಾದರೂ ಕೊಡಿಸುತ್ತಾರೆ. ಇಲ್ಲದಿದ್ದರೆ ಕೇಳಿ ಪಡೆಯುತ್ತೇನೆ. ಮಲಗಲು ಜಾಗ ಒದಗಿಸುತ್ತಾರೆ. ಕೆಲವೊಂದು ಕಡೆ ಅತ್ಯುತ್ತಮ ವಸತಿ ಸಿಕ್ಕರೆ, ಕೆಲವು ಕಡೆ ಕನಿಷ್ಠ ಸೌಲಭ್ಯವೂ ಇಲ್ಲದ ಜಾಗ ಸಿಕ್ಕಿದೆ. ನನಗೆ ಯಾವುದೇ ನಿರ್ದಿಷ್ಟ ಕೋರಿಕೆ ಇಲ್ಲ. ಅವಕಾಶ ಸಿಕ್ಕಲ್ಲಿ ತಂಗುತ್ತೇನೆ.

◆ **ನಿಮ್ಮ ದೃಷ್ಟಿಯಲ್ಲಿ ಮೌಲ್ಯಗಳ ಕುಸಿತಕ್ಕೆ ಕಾರಣ ಏನು? ಪಾದಯಾತ್ರೆಗೆ ಜನರ ಪ್ರತಿಕ್ರಿಯೆ ಹೇಗಿದೆ?**

ಜನರಲ್ಲಿ ಪ್ರೀತಿ–ಅಸಮಾಧಾನ ಎರಡನ್ನೂ ಕಂಡಿದ್ದೇನೆ. ಮಾನವೀಯ ಮೌಲ್ಯಗಳ ಕುಸಿತಕ್ಕೆ ಸಮಾಜವನ್ನು ಕಟ್ಟಬೇಕಾದ ವೃತ್ತಿಪರರು ಕಾರಣ ಎಂದುಕೊಂಡಿದ್ದೇನೆ. ಅದರಲ್ಲಿ ಮೊದಲ ಪಾಲು ರಾಜಕಾರಣಿಗಳದ್ದು, ನಂತರ ಸರ್ಕಾರಿ ಅಧಿಕಾರಿಗಳು, ಆಧುನಿಕ ಮಾಧ್ಯಮದ ಪತ್ರಕರ್ತರು, ಸ್ವಾಮೀಜಿಗಳು, ವೈದ್ಯಕೀಯ ಮತ್ತು ಶಿಕ್ಷಣ ಕ್ಷೇತ್ರ. ಇವು ಸಮಾಜದ ಬುನಾದಿ. ಇವರಿಂದಲೇ ವ್ಯಾಪಾರೀಕರಣ ಹೆಚ್ಚಾಗಿದೆ. ಈ ಕ್ಷೇತ್ರಗಳಿಂದ ಮೌಲ್ಯಗಳ ಕುಸಿತ ಕಾಣುತ್ತಿದೆ ಎಂದು ಅನುಭವದಿಂದ ಮನಗಂಡಿದ್ದೇನೆ.

◆ **ಹವಾಮಾನ ವೈಪರೀತ್ಯ ಮತ್ತು ಕೊರೊನಾ ಅಲೆಯನ್ನು ಹೇಗೆ ಎದುರಿಸಿದಿರಿ?**

ಅಚ್ಚರಿ ಎಂದರೆ ನಾನು ಎಲ್ಲೂ ಅನಾರೋಗ್ಯಕ್ಕೆ ತುತ್ತಾಗಲಿಲ್ಲ. ಮಾಸ್ಕ್ ಇಲ್ಲ, ಸ್ಯಾನಿಟೈಸರ್


ಪಾದಯಾತ್ರೆಯ ನಡುವೆ ಶಾಲಾ ಮಕ್ಕಳ ಜೊತೆ ಸಂವಾದ.